# ಶತಕ ಬಾರಿಸಿದ ವೈಭವ್ ಸೂರ್ಯವಂಶಿ ಸಹೋದರ ಆಶೀರ್ವಾದ್; ಬಾಸ್ ಬೇಬಿ ಪ್ರತಿಕ್ರಿಯೆ



**ಪಾಟ್ನಾ/ಸಮಷ್ಟಿಪುರ:** ಭಾರತೀಯ ಕ್ರಿಕೆಟ್‌ನಲ್ಲಿ ಇತ್ತೀಚೆಗೆ ಹೊಸ ಸಂಚಲನ ಮೂಡಿಸಿರುವ ಯುವ ಬ್ಯಾಟಿಂಗ್ ತಾರೆ ವೈಭವ್ ಸೂರ್ಯವಂಶಿ ಅವರ ಕುಟುಂಬದಿಂದ ಮತ್ತೊಬ್ಬ ಪ್ರತಿಭಾವಂತ ಕ್ರಿಕೆಟಿಗ ಹೊರಹೊಮ್ಮುತ್ತಿರುವ ಲಕ್ಷಣಗಳು ಗೋಚರಿಸಿವೆ. ರಾಜಸ್ಥಾನ್ ರಾಯಲ್ಸ್ ಪರ ಐಪಿಎಲ್‌ನಲ್ಲಿ ಮಿಂಚಿ ಭಾರತ ತಂಡದವರೆಗೂ ತಲುಪಿರುವ ವೈಭವ್ ಅವರ ಕಿರಿಯ ಸಹೋದರ ಆಶೀರ್ವಾದ್ ಸೂರ್ಯವಂಶಿ ಇದೀಗ ತಮ್ಮ ಅದ್ಭುತ ಬ್ಯಾಟಿಂಗ್ ಮೂಲಕ ಕ್ರಿಕೆಟ್ ಅಭಿಮಾನಿಗಳ ಗಮನ ಸೆಳೆದಿದ್ದಾರೆ.

ಬಿಹಾರದ ಸಮಷ್ಟಿಪುರ ಜಿಲ್ಲೆಯಲ್ಲಿ ನಡೆದ ಸ್ಥಳೀಯ ಅಭ್ಯಾಸ ಪಂದ್ಯದಲ್ಲಿ ಕ್ರಿಕೆಟ್ ಅಕಾಡೆಮಿ ತಾಜ್‌ಪುರ ತಂಡವನ್ನು ಪ್ರತಿನಿಧಿಸಿದ್ದ ಆಶೀರ್ವಾದ್, ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿ ಶತಕ ಸಿಡಿಸಿದ್ದಾರೆ. ಕೇವಲ 87 ಎಸೆತಗಳಲ್ಲಿ 103 ರನ್‌ಗಳ ಅಮೋಘ ಇನ್ನಿಂಗ್ಸ್ ಕಟ್ಟಿದ ಅವರು ಎದುರಾಳಿ ಬೌಲರ್‌ಗಳಿಗೆ ತೀವ್ರ ತಲೆನೋವಾಗಿದ್ದರು. ಅವರ ಶತಕದಲ್ಲಿ 20 ಬೌಂಡರಿಗಳು ಮತ್ತು ಒಂದು ಭರ್ಜರಿ ಸಿಕ್ಸರ್ ಸೇರಿದ್ದು, 118.39 ಸ್ಟ್ರೈಕ್‌ರೇಟ್‌ನೊಂದಿಗೆ ಬ್ಯಾಟಿಂಗ್ ನಡೆಸಿರುವುದು ವಿಶೇಷವಾಗಿದೆ.

ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದ ಆಶೀರ್ವಾದ್, ಮೈದಾನದ ಎಲ್ಲಾ ಕಡೆ ಚೆಂಡನ್ನು ಬೌಂಡರಿ ಗೆರೆಯಾಚೆಗೆ ಅಟ್ಟುವ ಮೂಲಕ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದರು. ಸ್ಥಳೀಯ ಮಟ್ಟದ ಪಂದ್ಯವಾಗಿದ್ದರೂ ಅವರ ಆಟದ ವೈಖರಿ ಮತ್ತು ಆತ್ಮವಿಶ್ವಾಸ ಕ್ರಿಕೆಟ್ ವಲಯದಲ್ಲಿ ಸಾಕಷ್ಟು ಮೆಚ್ಚುಗೆಗೆ ಪಾತ್ರವಾಗಿದೆ.

**ಸಹೋದರನ ಸಾಧನೆಗೆ ವೈಭವ್ ಸಂತಸ:** ಆಶೀರ್ವಾದ್ ಅವರ ಶತಕದ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ವೈಭವ್ ಸೂರ್ಯವಂಶಿ ಕೂಡ ತಮ್ಮ ಸಹೋದರನ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಆಶೀರ್ವಾದ್ ಅವರ ಫೋಟೋ ಹಂಚಿಕೊಂಡು ಎಂದು ಅಭಿನಂದಿಸಿದ್ದಾರೆ.

ವೈಭವ್ ಅವರ ಈ ಪೋಸ್ಟ್‌ಗೆ ಸಾವಿರಾರು ಅಭಿಮಾನಿಗಳು ಪ್ರತಿಕ್ರಿಯಿಸಿದ್ದು, "ಸೂರ್ಯವಂಶಿ ಕುಟುಂಬದಲ್ಲಿ ಮತ್ತೊಬ್ಬ ಕ್ರಿಕೆಟ್ ತಾರೆ ಹುಟ್ಟುತ್ತಿದ್ದಾನೆ", "ಮುಂದಿನ ದಿನಗಳಲ್ಲಿ ಭಾರತ ತಂಡದಲ್ಲಿ ಇಬ್ಬರು ಸಹೋದರರನ್ನು ನೋಡಬಹುದು" ಎಂಬಂತಹ ಕಾಮೆಂಟ್‌ಗಳು ಹರಿದುಬಂದಿವೆ.

**ಐಪಿಎಲ್‌ನಲ್ಲಿ ದಾಖಲೆ ಬರೆದ ವೈಭವ್:** ಇತ್ತ ವೈಭವ್ ಸೂರ್ಯವಂಶಿ ಈಗಾಗಲೇ ಭಾರತೀಯ ಕ್ರಿಕೆಟ್‌ನ ಭವಿಷ್ಯದ ತಾರೆ ಎಂದು ಗುರುತಿಸಿಕೊಂಡಿದ್ದಾರೆ. 2026ರ ಐಪಿಎಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ಪರ ಆಡಿದ ಅವರು ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಅಭಿಮಾನಿಗಳನ್ನು ರಂಜಿಸಿದ್ದರು.

ಟೂರ್ನಿಯಲ್ಲಿ ಒಟ್ಟು 16 ಪಂದ್ಯಗಳನ್ನು ಆಡಿದ್ದ ವೈಭವ್ 776 ರನ್‌ಗಳನ್ನು ಕಲೆಹಾಕಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಆಗಿ ಹೊರಹೊಮ್ಮಿದ್ದರು. ಸಾಯಿ ಸುದರ್ಶನ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ ಸೇರಿದಂತೆ ಹಲವು ಖ್ಯಾತ ಬ್ಯಾಟ್ಸ್‌ಮನ್‌ಗಳನ್ನು ಹಿಂದಿಕ್ಕಿ ಆರೆಂಜ್ ಕ್ಯಾಪ್ ಗೆದ್ದು ಎಲ್ಲರ ಗಮನ ಸೆಳೆದಿದ್ದರು.

ಅವರ ನಿರಂತರ ಪ್ರದರ್ಶನದ ಫಲವಾಗಿ ಭಾರತೀಯ ಹಿರಿಯ ಪುರುಷರ ಕ್ರಿಕೆಟ್ ತಂಡಕ್ಕೆ ಮೊದಲ ಬಾರಿಗೆ ಆಯ್ಕೆಯಾಗುವ ಅವಕಾಶವೂ ದೊರೆಯಿತು. ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಈ ಸಾಧನೆ ಮಾಡಿದ ಆಟಗಾರರಲ್ಲಿ ವೈಭವ್ ಒಬ್ಬರಾಗಿದ್ದಾರೆ.

**ತಾಜ್‌ಪುರದಲ್ಲಿ ಹಬ್ಬದ ಸಂಭ್ರಮ:** ಜೂನ್ 6ರಂದು ಭಾರತ ತಂಡಕ್ಕೆ ವೈಭವ್ ಆಯ್ಕೆಯಾಗಿರುವ ಸುದ್ದಿ ಹೊರಬಿದ್ದ ತಕ್ಷಣ ಬಿಹಾರದ ಸಮಷ್ಟಿಪುರ ಜಿಲ್ಲೆಯ ತಾಜ್‌ಪುರ ಗ್ರಾಮವೇ ಸಂಭ್ರಮದಲ್ಲಿ ಮುಳುಗಿತ್ತು. ಗ್ರಾಮಸ್ಥರು, ಬಂಧು-ಬಳಗ ಮತ್ತು ಅಭಿಮಾನಿಗಳು ಸೂರ್ಯವಂಶಿ ಅವರ ನಿವಾಸಕ್ಕೆ ಧಾವಿಸಿ ಸಿಹಿ ಹಂಚಿ ಸಂತಸ ಹಂಚಿಕೊಂಡಿದ್ದರು.

ಮನೆ ಮುಂದೆ ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಲಾಗಿತ್ತು. ಹಲವು ಯುವಕರು ಮೆರವಣಿಗೆ ನಡೆಸಿ ವೈಭವ್ ಅವರ ಸಾಧನೆಯನ್ನು ಕೊಂಡಾಡಿದ್ದರು. ಗ್ರಾಮದ ಇತಿಹಾಸದಲ್ಲೇ ಇದು ಅತ್ಯಂತ ಹೆಮ್ಮೆಯ ಕ್ಷಣ ಎಂದು ಹಲವರು ಅಭಿಪ್ರಾಯಪಟ್ಟಿದ್ದರು.

**ಕುಟುಂಬದ ಬೆಂಬಲವೇ ಯಶಸ್ಸಿನ ರಹಸ್ಯ:** ವೈಭವ್ ಹಾಗೂ ಆಶೀರ್ವಾದ್ ಇಬ್ಬರ ಯಶಸ್ಸಿನ ಹಿಂದೆ ಕುಟುಂಬದ ಬೆಂಬಲ ಪ್ರಮುಖ ಪಾತ್ರ ವಹಿಸಿದೆ ಎನ್ನಲಾಗುತ್ತಿದೆ. ಬಾಲ್ಯದಿಂದಲೇ ಕ್ರಿಕೆಟ್ ಮೇಲಿನ ಆಸಕ್ತಿಯನ್ನು ಗುರುತಿಸಿದ್ದ ಪೋಷಕರು, ಕಷ್ಟದ ಪರಿಸ್ಥಿತಿಯಲ್ಲೂ ಮಕ್ಕಳ ಕನಸಿಗೆ ಬೆಂಬಲ ನೀಡಿದ್ದರು.

ವೈಭವ್ ಅವರ ತಂದೆ ಸಂಜೀವ್ ಸೂರ್ಯವಂಶಿ ಮಾತನಾಡಿ, "ವೈಭವ್ ಬಾಲ್ಯದಿಂದಲೂ ದೇಶಕ್ಕಾಗಿ ಆಡಬೇಕು ಎಂಬ ಕನಸು ಹೊಂದಿದ್ದ. ಅದಕ್ಕಾಗಿ ಹಗಲು-ರಾತ್ರಿ ಶ್ರಮಿಸಿದ್ದಾನೆ. ಇಂದು ಆ ಕನಸು ನನಸಾಗಿದೆ. ಈಗ ಆಶೀರ್ವಾದ್ ಕೂಡ ಉತ್ತಮ ಪ್ರದರ್ಶನ ನೀಡುತ್ತಿರುವುದು ನಮಗೆ ಮತ್ತಷ್ಟು ಸಂತೋಷ ತಂದಿದೆ" ಎಂದು ಹೇಳಿದ್ದಾರೆ.

**ಮತ್ತೊಬ್ಬ ರಾಷ್ಟ್ರೀಯ ಆಟಗಾರನಾಗುವ ಲಕ್ಷಣ:** ಕ್ರಿಕೆಟ್ ತಜ್ಞರ ಪ್ರಕಾರ, ಆಶೀರ್ವಾದ್ ಅವರ ಬ್ಯಾಟಿಂಗ್ ಶೈಲಿ ಮತ್ತು ಆಟದ ಮನೋಭಾವ ಗಮನಿಸಿದರೆ ಭವಿಷ್ಯದಲ್ಲಿ ದೊಡ್ಡ ಮಟ್ಟದ ಕ್ರಿಕೆಟಿಗನಾಗಿ ಬೆಳೆಯುವ ಸಾಮರ್ಥ್ಯ ಹೊಂದಿದ್ದಾರೆ. ಬಾಲ್ಯದಲ್ಲೇ ಒತ್ತಡದ ಸಂದರ್ಭಗಳಲ್ಲಿ ರನ್ ಗಳಿಸುವ ಸಾಮರ್ಥ್ಯ, ವೇಗವಾಗಿ ಸ್ಕೋರ್ ಮಾಡುವ ಕೌಶಲ್ಯ ಮತ್ತು ಆಕ್ರಮಣಕಾರಿ ಆಟದ ಶೈಲಿ ಅವರನ್ನು ವಿಶೇಷವಾಗಿಸುತ್ತದೆ.

ಸರಿಯಾದ ತರಬೇತಿ, ಮಾರ್ಗದರ್ಶನ ಹಾಗೂ ಅವಕಾಶಗಳು ದೊರೆತರೆ ಆಶೀರ್ವಾದ್ ಕೂಡ ಅಂಡರ್-19, ರಾಜ್ಯ ತಂಡ ಮತ್ತು ಮುಂದೆ ರಾಷ್ಟ್ರೀಯ ತಂಡದ ಬಾಗಿಲು ತಟ್ಟುವ ಸಾಧ್ಯತೆ ಇದೆ ಎಂದು ಕ್ರಿಕೆಟ್ ವಲಯದಲ್ಲಿ ಚರ್ಚೆ ನಡೆಯುತ್ತಿದೆ.

**ಸೂರ್ಯವಂಶಿ ಸಹೋದರರತ್ತ ಕ್ರಿಕೆಟ್ ಪ್ರಿಯರ ಕಣ್ಣು:** ವೈಭವ್ ಈಗಾಗಲೇ ದೇಶದಾದ್ಯಂತ ಜನಪ್ರಿಯತೆ ಗಳಿಸಿದ್ದು, ಇದೀಗ ಆಶೀರ್ವಾದ್ ಕೂಡ ತಮ್ಮ ಪ್ರತಿಭೆಯ ಮೂಲಕ ಗಮನ ಸೆಳೆಯುತ್ತಿದ್ದಾರೆ. ಇಬ್ಬರು ಸಹೋದರರು ಒಂದೇ ಕುಟುಂಬದಿಂದ ಕ್ರಿಕೆಟ್‌ನಲ್ಲಿ ಸಾಧನೆ ಮಾಡುತ್ತಿರುವುದು ಬಿಹಾರದ ಕ್ರೀಡಾ ವಲಯಕ್ಕೆ ಹೆಮ್ಮೆಯ ವಿಷಯವಾಗಿದೆ.

ಭಾರತ ತಂಡದತ್ತ ದಾಪುಗಾಲಿಡುತ್ತಿರುವ ವೈಭವ್ ಸೂರ್ಯವಂಶಿ ಅವರ ಬಳಿಕ ಈಗ ಕಿರಿಯ ಸಹೋದರ ಆಶೀರ್ವಾದ್ ಸೂರ್ಯವಂಶಿ ಕೂಡ ಕ್ರಿಕೆಟ್ ವಲಯದಲ್ಲಿ ಹೊಸ ಭರವಸೆಯಾಗಿ ಹೊರಹೊಮ್ಮಿದ್ದು, ಮುಂದಿನ ದಿನಗಳಲ್ಲಿ ಈ ಸಹೋದರರ ಜೋಡಿ ಭಾರತೀಯ ಕ್ರಿಕೆಟ್‌ಗೆ ಮತ್ತಷ್ಟು ಬಲ ತುಂಬುವ ನಿರೀಕ್ಷೆ ಮೂಡಿಸಿದೆ.

# ಡಿವೋರ್ಸ್ ಬಗ್ಗೆ ಮನಬಿಚ್ಚಿ ಮಾತನಾಡಿದ ನಟಿ ನಿವೇದಿತಾ ಗೌಡ



**ಬೆಂಗಳೂರು:** ಸಾಮಾಜಿಕ ಜಾಲತಾಣಗಳಲ್ಲಿ ಸದಾ ಚರ್ಚೆಯಲ್ಲಿರುವ ಮಾಜಿ ಬಿಗ್‌ಬಾಸ್ ಸ್ಪರ್ಧಿ ಹಾಗೂ ನಟಿ ನಿವೇದಿತಾ ಗೌಡ, ಪತಿ ಚಂದನ್ ಶೆಟ್ಟಿ ಅವರಿಂದ ವಿಚ್ಛೇದನ ಪಡೆದ ಬಳಿಕ ಮೊದಲ ಬಾರಿಗೆ ತಮ್ಮ ದಾಂಪತ್ಯ ಜೀವನ ಮತ್ತು ಡಿವೋರ್ಸ್ ಕುರಿತು ಮುಕ್ತವಾಗಿ ಮಾತನಾಡಿದ್ದಾರೆ. ತಮ್ಮಿಬ್ಬರ ವಿಚ್ಛೇದನದ ಹಿಂದೆ ಯಾವುದೇ ಒಬ್ಬರ ತಪ್ಪು ಇರಲಿಲ್ಲ, ಹೊಂದಾಣಿಕೆಯ ಕೊರತೆಯೇ ಪ್ರಮುಖ ಕಾರಣವಾಗಿತ್ತು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬಿಗ್‌ಬಾಸ್ ಕನ್ನಡ ಸೀಸನ್ 5ರಲ್ಲಿ ಪರಿಚಯವಾಗಿ ಪ್ರೀತಿಗೆ ಬಿದ್ದಿದ್ದ ಚಂದನ್ ಶೆಟ್ಟಿ ಮತ್ತು ನಿವೇದಿತಾ ಗೌಡ, ಹಲವು ವರ್ಷಗಳ ಸ್ನೇಹ ಹಾಗೂ ಪ್ರೀತಿಯ ಬಳಿಕ 2020ರ ಫೆಬ್ರವರಿ 26ರಂದು ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಕನ್ನಡದ ಜನಪ್ರಿಯ ಜೋಡಿಗಳಲ್ಲಿ ಒಂದಾಗಿ ಗುರುತಿಸಿಕೊಂಡಿದ್ದ ಈ ಜೋಡಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದ ವಿಡಿಯೋಗಳು, ಫೋಟೋಗಳು ಮತ್ತು ರೀಲ್ಸ್‌ಗಳ ಮೂಲಕ ಅಭಿಮಾನಿಗಳ ಮನ ಗೆದ್ದಿದ್ದರು.

ಆದರೆ ಎಲ್ಲರಿಗೂ ಮಾದರಿಯಂತಿದ್ದ ಈ ದಾಂಪತ್ಯ ಕೇವಲ ನಾಲ್ಕು ವರ್ಷಗಳಲ್ಲೇ ಅಂತ್ಯಗೊಂಡಿತ್ತು. 2024ರಲ್ಲಿ ಇಬ್ಬರೂ ಪರಸ್ಪರ ಒಪ್ಪಿಗೆ ಮೇರೆಗೆ ವಿಚ್ಛೇದನ ಪಡೆದು ಬೇರೆಬೇರೆ ದಾರಿಯಲ್ಲಿ ಸಾಗಿದ್ದರು. ಈ ಸುದ್ದಿ ಅಭಿಮಾನಿಗಳಿಗೆ ಆಘಾತ ತಂದಿದ್ದು, ವಿಚ್ಛೇದನದ ಕಾರಣದ ಬಗ್ಗೆ ಹಲವು ಊಹಾಪೋಹಗಳು ಹರಿದಾಡಿದ್ದವು.

ಇದೀಗ ಯೂಟ್ಯೂಬ್ ಸಂದರ್ಶನವೊಂದರಲ್ಲಿ ಮಾತನಾಡಿರುವ ನಿವೇದಿತಾ ಗೌಡ, "ವಿಚ್ಛೇದನ ಪಡೆಯಬೇಕು ಅಂತ ಯಾರೂ ಮದುವೆಯಾಗುವುದಿಲ್ಲ. ಎಲ್ಲರೂ ಸಂತೋಷದ ಜೀವನ ನಡೆಸಬೇಕು ಎಂಬ ಕನಸಿನೊಂದಿಗೆ ಮದುವೆಯಾಗುತ್ತಾರೆ. ನಾವೂ ಸಹ ಅದೇ ಕನಸಿನೊಂದಿಗೆ ಮದುವೆಯಾಗಿದ್ದೆವು. ಆದರೆ ಕಾಲ ಕಳೆದಂತೆ ನಮ್ಮಿಬ್ಬರ ನಡುವೆ ಹೊಂದಾಣಿಕೆ ಸಮಸ್ಯೆಗಳು ಕಾಣಿಸಿಕೊಂಡವು. ಅದರಿಂದಲೇ ಈ ನಿರ್ಧಾರಕ್ಕೆ ಬರಬೇಕಾಯಿತು" ಎಂದು ಹೇಳಿದ್ದಾರೆ.

"ಡಿವೋರ್ಸ್ ಏಕೆ ಆಯಿತು ಎಂಬುದರ ಬಗ್ಗೆ ನಾನು ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಅದು ನಮ್ಮಿಬ್ಬರ ವೈಯಕ್ತಿಕ ವಿಷಯ. ಅದನ್ನು ಸಾರ್ವಜನಿಕವಾಗಿ ಚರ್ಚಿಸುವ ಅಗತ್ಯವಿಲ್ಲ. ನಮ್ಮ ಹತ್ತಿರದವರಿಗೆ ಸತ್ಯ ಗೊತ್ತಿದ್ದರೆ ಸಾಕು. ಇಡೀ ಜಗತ್ತಿಗೆ ವಿವರ ಕೊಡಬೇಕಾದ ಅಗತ್ಯವಿಲ್ಲ" ಎಂದು ಅವರು ಹೇಳಿದ್ದಾರೆ.

'ನಮ್ಮಿಬ್ಬರ ನಡುವೆ ಈಗಲೂ ಗೌರವ ಇದೆ': ವಿಚ್ಛೇದನದ ಬಳಿಕವೂ ತಮ್ಮ ಮತ್ತು ಚಂದನ್ ಶೆಟ್ಟಿ ನಡುವೆ ಪರಸ್ಪರ ಗೌರವ ಉಳಿದಿದೆ ಎಂದು ನಿವೇದಿತಾ ಹೇಳಿದ್ದಾರೆ. "ನಮ್ಮಿಬ್ಬರ ನಡುವೆ ಯಾವುದೇ ದ್ವೇಷ ಇಲ್ಲ. ಒಬ್ಬರ ಬಗ್ಗೆ ಮತ್ತೊಬ್ಬರಿಗೆ ಗೌರವ ಇದೆ. ಅದಕ್ಕಾಗಿಯೇ ವಿಚ್ಛೇದನದ ನಂತರ ನಾವು ಒಬ್ಬರ ವಿರುದ್ಧ ಒಬ್ಬರು ಮಾತನಾಡಿಲ್ಲ. ಖಾಸಗಿ ವಿಷಯಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ಚರ್ಚಿಸುವುದು ಸರಿಯಲ್ಲ ಎಂದು ನಂಬಿದ್ದೇವೆ" ಎಂದರು.

ಸಾಮಾಜಿಕ ಜಾಲತಾಣಗಳಲ್ಲಿ ವಿಚ್ಛೇದನದ ಬಗ್ಗೆ ಸಾಕಷ್ಟು ಟೀಕೆಗಳು ಮತ್ತು ಆರೋಪಗಳು ಕೇಳಿಬಂದಿದ್ದವು. ವಿಶೇಷವಾಗಿ ನಿವೇದಿತಾ ಗೌಡ ಅವರನ್ನೇ ಗುರಿಯಾಗಿಸಿಕೊಂಡು ಹಲವರು ಟೀಕೆ ಮಾಡಿದ್ದರು. ಈ ಬಗ್ಗೆ ಮಾತನಾಡಿದ ಅವರು, "ನಮ್ಮ ಜೀವನಕ್ಕೆ ಸಂಬಂಧವೇ ಇಲ್ಲದವರು ಕೂಡ ಬಂದು ಏನೇನೋ ಮಾತನಾಡಲು ಆರಂಭಿಸಿದರು. ಆಗಲೇ ಎಲ್ಲ ಊಹಾಪೋಹಗಳಿಗೆ ತೆರೆ ಎಳೆಯಲು ನಾವು ಜಂಟಿ ಸುದ್ದಿಗೋಷ್ಠಿ ನಡೆಸಿದ್ದೆವು" ಎಂದು ಹೇಳಿದ್ದಾರೆ.

'ಸೋಶಿಯಲ್ ಮೀಡಿಯಾ ಒತ್ತಡವೂ ಇತ್ತು': ತಮ್ಮ ಮದುವೆಯ ಮೇಲೆ ಸಾಮಾಜಿಕ ಜಾಲತಾಣದ ಪ್ರಭಾವವೂ ಇತ್ತು ಎಂಬ ಅಚ್ಚರಿಯ ಸಂಗತಿಯನ್ನು ನಿವೇದಿತಾ ಬಹಿರಂಗಪಡಿಸಿದ್ದಾರೆ. "ನಾವು ಬಿಗ್‌ಬಾಸ್ ಮನೆಗೆ ಹೋದ ಬಳಿಕ ಜನರು ನಮ್ಮನ್ನು ಜೋಡಿಯಾಗಿ ನೋಡಲು ಆರಂಭಿಸಿದರು. ಸಾಮಾಜಿಕ ಜಾಲತಾಣದಲ್ಲೂ ಎಲ್ಲೆಡೆ ನಮ್ಮ ಬಗ್ಗೆ ಜೋಡಿ ಎಂಬ ಇಮೇಜ್ ನಿರ್ಮಾಣವಾಯಿತು. ಕಾರ್ಯಕ್ರಮಗಳಿಗೆ ಹೋದಾಗಲೂ ನೀವು ಮದುವೆಯಾಗಬೇಕು ಎಂದು ಜನರು ಹೇಳುತ್ತಿದ್ದರು. ಆ ವಾತಾವರಣದ ಪ್ರಭಾವ ನಮ್ಮ ಮೇಲೂ ಬಿದ್ದಿತ್ತು" ಎಂದು ತಿಳಿಸಿದ್ದಾರೆ.

"ಜನರ ನಿರೀಕ್ಷೆಗಳು, ಅಭಿಮಾನಿಗಳ ಪ್ರೀತಿ ಮತ್ತು ಸಾಮಾಜಿಕ ಜಾಲತಾಣದ ಪ್ರಭಾವದ ನಡುವೆ ನಾವು ಮದುವೆಯಾದೆವು. ಆದರೆ ಮದುವೆಯ ನಂತರ ನೈಜ ಜೀವನದಲ್ಲಿ ನಮ್ಮಿಬ್ಬರ ಆಲೋಚನೆಗಳು, ಜೀವನ ಶೈಲಿ ಮತ್ತು ನಿರೀಕ್ಷೆಗಳು ಭಿನ್ನವಾಗಿವೆ ಎಂಬುದು ತಿಳಿಯಿತು. ಕೊನೆಗೆ ಹೊಂದಾಣಿಕೆ ಇಲ್ಲ ಎಂಬುದನ್ನು ಅರಿತು ಪರಸ್ಪರ ಒಪ್ಪಿಗೆ ಮೇರೆಗೆ ಬೇರ್ಪಟ್ಟೆವು" ಎಂದು ಅವರು ಹೇಳಿದ್ದಾರೆ.

ಅಭಿಮಾನಿಗಳಲ್ಲಿ ಮತ್ತೆ ಚರ್ಚೆ: ನಿವೇದಿತಾ ಅವರ ಈ ಹೇಳಿಕೆ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ವಿಚ್ಛೇದನದ ಬಗ್ಗೆ ಮೊದಲ ಬಾರಿಗೆ ಇಷ್ಟು ಸ್ಪಷ್ಟವಾಗಿ ಮಾತನಾಡಿರುವ ಅವರು, ಮದುವೆ ಮತ್ತು ಡಿವೋರ್ಸ್ ಎರಡನ್ನೂ ಪ್ರೌಢತೆಯಿಂದ ನಿಭಾಯಿಸಿರುವುದಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಒಮ್ಮೆ ಕನ್ನಡದ ಅತ್ಯಂತ ಜನಪ್ರಿಯ ಜೋಡಿಯಾಗಿದ್ದ ಚಂದನ್ ಶೆಟ್ಟಿ ಮತ್ತು ನಿವೇದಿತಾ ಗೌಡ ಈಗ ಬೇರೆಬೇರೆ ಜೀವನ ನಡೆಸುತ್ತಿದ್ದರೂ, ಪರಸ್ಪರ ಗೌರವ ಮತ್ತು ಪ್ರೌಢತೆ ಕಾಪಾಡಿಕೊಂಡಿರುವುದು ಅಭಿಮಾನಿಗಳ ಗಮನ ಸೆಳೆದಿದೆ. ಅವರ ಇತ್ತೀಚಿನ ಹೇಳಿಕೆ ಮತ್ತೊಮ್ಮೆ ಈ ಜೋಡಿಯ ವಿಚ್ಛೇದನದ ವಿಚಾರವನ್ನು ಚರ್ಚೆಯ ಕೇಂದ್ರಬಿಂದುವನ್ನಾಗಿಸಿದೆ.

# ರಂಗಾಯಣ ರಘು 400ನೇ ಸಿನಿಮಾದ ಟೈಟಲ್ ರಿವೀಲ್.. ಹೊಸ ಜೀವನಕ್ಕೆ ಡಾಲಿ ಧನಂಜಯ್ ಸಾಥ್



**ಬೆಂಗಳೂರು:** ಕನ್ನಡ ಚಿತ್ರರಂಗದ ಬಹುಬೇಡಿಕೆಯ ಪೋಷಕ ನಟ ರಂಗಾಯಣ ರಘು ತಮ್ಮ ವೃತ್ತಿಜೀವನದ ಮತ್ತೊಂದು ಮಹತ್ವದ ಮೈಲಿಗಲ್ಲು ತಲುಪಿದ್ದಾರೆ. "ತಲೆ ಬಾಚ್ಕೊಳಿ... ಪೌಡ್ರು ಹಾಕ್ಕೊಳಿ... ದುನಿಯಾ ತುಂಬಾ ಕಾಸ್ಟ್ಲಿ" ಎಂಬ ಜನಪ್ರಿಯ ಡೈಲಾಗ್ ಮೂಲಕ ಮನೆಮಾತಾಗಿದ್ದ ರಂಗಾಯಣ ರಘು ಇದೀಗ ತಮ್ಮ 400ನೇ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ.

'ಹೊಸ ಜೀವನ' ಎಂದು ಹೆಸರಿಡಲಾಗಿರುವ ಈ ಚಿತ್ರವು ರಂಗಾಯಣ ರಘು ಅವರ ಸಿನಿ ಪಯಣದ ವಿಶೇಷ ಚಿತ್ರವಾಗಿ ಗುರುತಿಸಿಕೊಂಡಿದೆ. ರಂಗಭೂಮಿಯಿಂದ ಸಿನಿರಂಗಕ್ಕೆ ಕಾಲಿಟ್ಟ ಅವರು ಕಳೆದ ಎರಡು ದಶಕಗಳಲ್ಲಿ ನೂರಾರು ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದಾರೆ.

ಚಿತ್ರದ ಶೀರ್ಷಿಕೆಯನ್ನು ನಟ ಡಾಲಿ ಧನಂಜಯ್ ಅನಾವರಣಗೊಳಿಸಿದ್ದು, ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ. "ರಂಗಾಯಣ ರಘು ಅವರಂತಹ ಅದ್ಭುತ ಕಲಾವಿದರ 400ನೇ ಸಿನಿಮಾ ಕನ್ನಡ ಚಿತ್ರರಂಗಕ್ಕೆ ಹೆಮ್ಮೆಯ ವಿಷಯ" ಎಂದು ಧನಂಜಯ್ ಹೇಳಿದ್ದಾರೆ.

ಚಿತ್ರವನ್ನು ಮೋಹನ್ ಕುಮಾರ್ ಹನುಮಯ್ಯ ನಿರ್ದೇಶಿಸುತ್ತಿದ್ದು, ಇದು ಅವರ ಮೊದಲ ಪೂರ್ಣ ಪ್ರಮಾಣದ ನಿರ್ದೇಶನದ ಚಿತ್ರವಾಗಿದೆ. ಈಗಾಗಲೇ ಹಲವು ಕಿರುಚಿತ್ರಗಳನ್ನು ನಿರ್ದೇಶಿಸಿರುವ ಅವರು, ಈ ಚಿತ್ರದ ಮೂಲಕ ಹೊಸ ಹೆಜ್ಜೆ ಇಡುತ್ತಿದ್ದಾರೆ.

ಚಿತ್ರದಲ್ಲಿ ರಂಗಾಯಣ ರಘು ಜೊತೆಗೆ ಪ್ರಭು ಮುಂಡ್ಕೂರ್, ಸ್ವಾತಿ ಮುಪ್ಪಾಲ, ಅಚ್ಯುತ್ ಕುಮಾರ್, ಶಿವರಾಜ್ ಕೆ.ಆರ್.ಪೇಟೆ, ಸುಹಾಸ್ ಅತ್ರೇಯಸ್, ಅಭಿ ಸಾಮ್ರಾಟ್ ಹಾಗೂ ಉದಯ್ ಆಚಾರ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಜಿ.ಎಸ್. ಸಂಜೀವ್ ಪ್ರಸಾದ್ ನಿರ್ಮಾಪಕರಾಗಿದ್ದು, ಅರ್ಜುನ್ ಪ್ರೊಡಕ್ಷನ್ಸ್ ಹಾಗೂ ಚಿರು ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.

ಚಿತ್ರದ ಬಗ್ಗೆ ಮಾತನಾಡಿರುವ ರಂಗಾಯಣ ರಘು, "400ನೇ ಸಿನಿಮಾ ಎಂಬುದು ನನ್ನ ಪಾಲಿಗೆ ಅತ್ಯಂತ ವಿಶೇಷ ಕ್ಷಣ. ಇಷ್ಟು ವರ್ಷಗಳ ಕಾಲ ಪ್ರೇಕ್ಷಕರು ನನ್ನನ್ನು ಬೆಂಬಲಿಸಿದ್ದಾರೆ. 'ಹೊಸ ಜೀವನ' ಉತ್ತಮ ಕಥಾಹಂದರ ಹೊಂದಿರುವ ಸಿನಿಮಾ. ಈ ಚಿತ್ರವೂ ಪ್ರೇಕ್ಷಕರ ಮನಸ್ಸಿಗೆ ತಲುಪಲಿದೆ ಎಂಬ ವಿಶ್ವಾಸ ಇದೆ" ಎಂದು ಹೇಳಿದ್ದಾರೆ.

'ಹೊಸ ಜೀವನ' ಚಿತ್ರವು ಸ್ನೇಹ, ಪ್ರೀತಿ, ಜೀವನದ ಹೋರಾಟ ಹಾಗೂ ಮಾನವೀಯ ಮೌಲ್ಯಗಳ ಸುತ್ತ ಸಾಗುವ ಕಥೆಯನ್ನು ಹೊಂದಿದೆ. ಸುಮುಖ ರಾವ್ ಸಂಗೀತ, ರಾಜ್ ಕಾಂತ್ ಎಸ್ ಛಾಯಾಗ್ರಹಣ ಹಾಗೂ ಶಶಿಧರ್ ಗೌಡ ಸಂಕಲನ ಚಿತ್ರದ ಪ್ರಮುಖ ಆಕರ್ಷಣೆಯಾಗಿದ್ದು, ಶೀಘ್ರದಲ್ಲೇ ಸಿನಿಮಾ ಬಗ್ಗೆ ಮತ್ತಷ್ಟು ಮಾಹಿತಿಯನ್ನು ಚಿತ್ರತಂಡ ಹಂಚಿಕೊಳ್ಳಲಿದೆ.

ಅದರೊಂದಿಗೆ, 'ಹೊಸ ಜೀವನ' ಚಿತ್ರದ ಮೂಲಕ 400ನೇ ಸಿನಿಮಾ ಮೈಲಿಗಲ್ಲು ತಲುಪಿರುವ ರಂಗಾಯಣ ರಘು ಮತ್ತೊಮ್ಮೆ ತಮ್ಮ ಅಭಿನಯ ಸಾಮರ್ಥ್ಯವನ್ನು ಸಾಬೀತುಪಡಿಸಲು ಸಜ್ಜಾಗಿದ್ದಾರೆ. ಭಾವನಾತ್ಮಕ ಕಥಾಹಂದರ, ಅನುಭವಿ ಕಲಾವಿದರ ಬಳಗ ಹಾಗೂ ಹೊಸ ನಿರ್ದೇಶಕರ ವಿಭಿನ್ನ ಪ್ರಯತ್ನದ ಕಾರಣದಿಂದ ಸಿನಿಮಾ ಈಗಾಗಲೇ ಸಿನಿಪ್ರಿಯರ ಗಮನ ಸೆಳೆದಿದ್ದು, ಬಿಡುಗಡೆ ಬಳಿಕ ಪ್ರೇಕ್ಷಕರಿಂದ ಯಾವ ರೀತಿಯ ಪ್ರತಿಕ್ರಿಯೆ ಪಡೆಯಲಿದೆ ಎಂಬ ಕುತೂಹಲ ಚಿತ್ರರಂಗದಲ್ಲಿ ಮೂಡಿದೆ.

# ಗಂಭೀರ ಲೋಪ ಎಸಗಿದ ಮಲಯಾಳಂ ಸಿನಿಮಾ, ತನಿಖೆ ಆರಂಭಿಸಿದ ಸಿಬಿಎಫ್‌ಸಿ

**ಕೊಚ್ಚಿ:** ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ ನೀಡುವ ಪ್ರಮಾಣಪತ್ರ ಮತ್ತು ಅದರ ಮಾರ್ಗಸೂಚಿಗಳನ್ನು ಪಾಲಿಸುವುದು ಭಾರತದ ಪ್ರತಿಯೊಂದು ಸಿನಿಮಾಕ್ಕೂ ಕಡ್ಡಾಯವಾಗಿದೆ. ಪ್ರಮಾಣೀಕರಣದ ವೇಳೆ ಸಿಬಿಎಫ್‌ಸಿ ಸೂಚಿಸುವ ಕಟ್‌ಗಳು, ಮ್ಯೂಟ್‌ಗಳು ಅಥವಾ ತಿದ್ದುಪಡಿಗಳನ್ನು ಅಳವಡಿಸಿಕೊಂಡ ಬಳಿಕವೇ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳಬೇಕು. ಆದರೆ ಇತ್ತೀಚೆಗೆ ಬಿಡುಗಡೆಯಾಗಿರುವ ಮಲಯಾಳಂ ಸಿನಿಮಾ 'ಮಾಲಿವುಡ್ ಟೈಮ್ಸ್' ವಿರುದ್ಧ ಗಂಭೀರ ಆರೋಪ ಕೇಳಿಬಂದಿದ್ದು, ಸಿಬಿಎಫ್‌ಸಿ ಸೂಚಿಸಿದ ತಿದ್ದುಪಡಿಗಳನ್ನು ಪಾಲಿಸದೇ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶಿಸಲಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ತನಿಖೆ ಆರಂಭವಾಗಿದೆ.

'ಪ್ರೇಮಲು' ಖ್ಯಾತಿಯ ನಟ ನಸ್ಲೆನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾ ಮಲಯಾಳಂ ಚಿತ್ರರಂಗದ ಹಿನ್ನೆಲೆಯ ಕಥೆಯನ್ನು ಒಳಗೊಂಡಿದೆ. ಚಿತ್ರದಲ್ಲಿ ಯುವ ನಿರ್ದೇಶಕನ ಪಾತ್ರದಲ್ಲಿ ನಸ್ಲೆನ್ ಕಾಣಿಸಿಕೊಂಡಿದ್ದು, ಸಿನಿಮಾ ಬಿಡುಗಡೆಯಾದ ಬಳಿಕ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಕೂಡ ವ್ಯಕ್ತವಾಗಿತ್ತು. ಆದರೆ ಈಗ ಚಿತ್ರದ ಪ್ರದರ್ಶನಕ್ಕೆ ಸಂಬಂಧಿಸಿದ ವಿವಾದ ನಿರ್ಮಾಪಕರಿಗೆ ತಲೆನೋವಾಗಿ ಪರಿಣಮಿಸಿದೆ.

ಮೂಲಗಳ ಪ್ರಕಾರ, ಸಿಬಿಎಫ್‌ಸಿಗೆ ಸಲ್ಲಿಸಲಾಗಿದ್ದ ಆವೃತ್ತಿಯಲ್ಲಿ ಕೆಲವು ಅವಾಚ್ಯ ಪದಗಳನ್ನು ಮ್ಯೂಟ್ ಮಾಡಲಾಗಿತ್ತು. ಕೆಲವು ಸಂಭಾಷಣೆಗಳಿಗೆ ತಿದ್ದುಪಡಿ ಮಾಡಬೇಕೆಂದು ಮಂಡಳಿ ಸೂಚಿಸಿತ್ತು. ಆದರೆ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಿರುವ ಸಿನಿಮಾದಲ್ಲಿ ಆ ಪದಗಳು ಸ್ಪಷ್ಟವಾಗಿ ಕೇಳಿಸುತ್ತಿವೆ ಎಂದು ಕೆಲ ಪ್ರೇಕ್ಷಕರು ಆರೋಪಿಸಿದ್ದಾರೆ. ಪ್ರಮಾಣೀಕರಣ ಪಡೆದ ಪ್ರತಿಯಲ್ಲಿದ್ದ ಬದಲಾವಣೆಗಳು ಅಂತಿಮ ಪ್ರದರ್ಶನದಲ್ಲಿ ಕಾಣುತ್ತಿಲ್ಲ ಎಂಬ ದೂರುಗಳು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿವೆ.

ಇದರ ಬೆನ್ನಲ್ಲೇ ಸಿಬಿಎಫ್‌ಸಿ ಅಧಿಕಾರಿಗಳು ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಸಿನಿಮಾದ ಪ್ರಮಾಣೀಕೃತ ಆವೃತ್ತಿ ಮತ್ತು ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಿರುವ ಪ್ರತಿಯನ್ನು ಪರಿಶೀಲಿಸುವ ಪ್ರಕ್ರಿಯೆ ಆರಂಭಿಸಿದ್ದಾರೆ. ಚಿತ್ರಮಂದಿರಗಳಿಂದ ಮಾದರಿ ಪ್ರತಿಗಳನ್ನು ಸಂಗ್ರಹಿಸಿ ಪರಿಶೀಲನೆ ನಡೆಸಲಾಗುತ್ತಿದೆ ಎನ್ನಲಾಗಿದೆ.

ಚಿತ್ರರಂಗದ ಮೂಲಗಳ ಪ್ರಕಾರ, ಒಂದು ವೇಳೆ ಆರೋಪಗಳು ಸಾಬೀತಾದರೆ ಇದು ಸಾಮಾನ್ಯ ತಾಂತ್ರಿಕ ತಪ್ಪಲ್ಲ; ನೇರವಾಗಿ ಸಿನಿಮಾಟೋಗ್ರಾಫ್ ಕಾಯ್ದೆಯ ಉಲ್ಲಂಘನೆಯಾಗಿ ಪರಿಗಣಿಸಲಾಗುತ್ತದೆ. ಪ್ರಮಾಣೀಕರಣ ಪಡೆದ ಬಳಿಕ ಸಿನಿಮಾದಲ್ಲಿ ಯಾವುದೇ ಬದಲಾವಣೆ ಮಾಡಲು ಅಥವಾ ಬೇರೆ ಆವೃತ್ತಿಯನ್ನು ಪ್ರದರ್ಶಿಸಲು ನಿರ್ಮಾಪಕರಿಗೆ ಅಧಿಕಾರ ಇರುವುದಿಲ್ಲ. ಹಾಗಾಗಿ ಆರೋಪ ಸಾಬೀತಾದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಬಹುದು.

1952ರ ಸಿನಿಮಾಟೋಗ್ರಾಫ್ ಕಾಯ್ದೆಯ ಪ್ರಕಾರ ಪ್ರಮಾಣೀಕರಣದ ನಿಯಮ ಉಲ್ಲಂಘಿಸಿದರೆ ದಂಡ, ಪ್ರದರ್ಶನ ಸ್ಥಗಿತ, ಪ್ರಮಾಣಪತ್ರ ರದ್ದು ಸೇರಿದಂತೆ ವಿವಿಧ ಕಾನೂನು ಕ್ರಮಗಳನ್ನು ಕೈಗೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ ಸಿನಿಮಾವನ್ನು ಮರುಪ್ರಮಾಣೀಕರಣಕ್ಕಾಗಿ ಮತ್ತೆ ಸಿಬಿಎಫ್‌ಸಿಗೆ ಸಲ್ಲಿಸುವಂತೆಯೂ ಆದೇಶಿಸಬಹುದು.

ಚಿತ್ರರಂಗದಲ್ಲಿ ಇಂತಹ ಪ್ರಕರಣಗಳು ಅಪರೂಪವಾಗಿದ್ದರೂ, ಹಿಂದೆ ಕೆಲವು ಸಿನಿಮಾಗಳು ಸಿಬಿಎಫ್‌ಸಿ ಸೂಚಿಸಿದ ಬದಲಾವಣೆಗಳನ್ನು ಪಾಲಿಸದ ಆರೋಪ ಎದುರಿಸಿದ್ದವು. ಆದರೆ ನೇರವಾಗಿ ಚಿತ್ರಮಂದಿರಗಳಲ್ಲಿ ಪ್ರಮಾಣೀಕರಣ ಪಡೆದ ಆವೃತ್ತಿಗಿಂತ ಬೇರೆ ಪ್ರತಿಯನ್ನು ಪ್ರದರ್ಶಿಸಿರುವ ಆರೋಪ ಅತ್ಯಂತ ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಸಿನಿಮಾ ನಿರ್ಮಾಪಕರು ಅಥವಾ ನಿರ್ದೇಶಕರಿಂದ ಈ ಕುರಿತು ಇನ್ನೂ ಅಧಿಕೃತ ಸ್ಪಷ್ಟನೆ ಹೊರಬಂದಿಲ್ಲ. ಆದರೆ ಸಿಬಿಎಫ್‌ಸಿ ತನಿಖೆ ಪೂರ್ಣಗೊಂಡ ಬಳಿಕವೇ ನಿಜಾಂಶ ಹೊರಬೀಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ 'ಮಾಲಿವುಡ್ ಟೈಮ್ಸ್' ಚಿತ್ರಕ್ಕೆ 'ಗಂ-13' ಪ್ರಮಾಣಪತ್ರ ನೀಡಲಾಗಿದ್ದು, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ. ನಸ್ಲೆನ್ ಅಭಿನಯ, ಚಿತ್ರದ ಕಥಾವಸ್ತು ಹಾಗೂ ಮಲಯಾಳಂ ಚಿತ್ರರಂಗದ ಒಳನೋಟಗಳನ್ನು ಬಿಂಬಿಸಿರುವ ಶೈಲಿಗೆ ಮೆಚ್ಚುಗೆ ವ್ಯಕ್ತವಾಗುತ್ತಿರುವ ನಡುವೆಯೇ ಈ ಹೊಸ ವಿವಾದ ಚಿತ್ರದ ಮೇಲೆ ಕಪ್ಪುಚುಕ್ಕೆ ಮೂಡಿಸಿದೆ.

ಒಂದು ವೇಳೆ ಆರೋಪಗಳು ಸಾಬೀತಾದರೆ ನಿರ್ಮಾಪಕರಿಗೆ ಕಾನೂನು ಸಂಕಷ್ಟ ಎದುರಾಗುವುದಷ್ಟೇ ಅಲ್ಲ, ಚಿತ್ರದ ಮುಂದಿನ ಪ್ರದರ್ಶನಕ್ಕೂ ತಾತ್ಕಾಲಿಕ ಅಡ್ಡಿ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಈಗ ಚಿತ್ರರಂಗದ ಗಮನ ಸಂಪೂರ್ಣವಾಗಿ ಸಿಬಿಎಫ್‌ಸಿ ತನಿಖೆಯ ಫಲಿತಾಂಶದತ್ತ ನೆಟ್ಟಿದೆ. ಈ ಪ್ರಕರಣವು ಮುಂದಿನ ದಿನಗಳಲ್ಲಿ ಸಿನಿಮಾ ಪ್ರಮಾಣೀಕರಣ ಮತ್ತು ಪ್ರದರ್ಶನ ನಿಯಮಗಳ ಕುರಿತು ದೇಶಾದ್ಯಂತ ಹೊಸ ಚರ್ಚೆಗೆ ಕಾರಣವಾಗುವ ಸಾಧ್ಯತೆಯೂ ಇದೆ.

# ಜೂನ್ 20ರಿಂದ ರಚಿತಾ ರಾಮ್-ಸತೀಶ್ ಅಯೋಗ್ಯ-2 ಗಾನಬಜಾನ




**ಬೆಂಗಳೂರು:** ಸ್ಯಾಂಡಲ್‌ವುಡ್‌ನಲ್ಲಿ ಕೆಲ ಸಿನಿಮಾಗಳು ಕೇವಲ ಬಾಕ್ಸ್ ಆಫೀಸ್‌ನಲ್ಲಿ ಮಾತ್ರವಲ್ಲ, ಸಂಗೀತದ ಮೂಲಕವೂ ಹೊಸ ದಾಖಲೆಗಳನ್ನು ನಿರ್ಮಿಸುತ್ತವೆ. ಅಂತಹ ಸಿನಿಮಾಗಳ ಪೈಕಿ 'ಅಯೋಗ್ಯ' ಕೂಡ ಒಂದು. ನೀನಾಸಂ ಸತೀಶ್ ಮತ್ತು ರಚಿತಾ ರಾಮ್ ಅಭಿನಯದ ಈ ಸಿನಿಮಾ ಬಿಡುಗಡೆಯಾದ ಸಂದರ್ಭದಲ್ಲಿ ಅದರ ಹಾಡುಗಳು ಕನ್ನಡ ಚಿತ್ರರಂಗದಲ್ಲಿ ಹೊಸ ಟ್ರೆಂಡ್ ಸೃಷ್ಟಿಸಿದ್ದವು. ಅದರಲ್ಲೂ 'ಏನಮ್ಮಿ ಏನಮ್ಮಿ' ಹಾಡು ಕನ್ನಡ ಸಂಗೀತ ಲೋಕದಲ್ಲಿ ಇತಿಹಾಸ ನಿರ್ಮಿಸಿತ್ತು.

ಈಗ ಅದೇ ಚಿತ್ರದ ಮುಂದುವರಿದ ಭಾಗವಾದ 'ಅಯೋಗ್ಯ-2' ಭರ್ಜರಿ ಸಿದ್ಧತೆಯೊಂದಿಗೆ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದು, ಸಿನಿಮಾ ಬಿಡುಗಡೆಗೂ ಮುನ್ನವೇ ಗಾಂಧಿನಗರದಲ್ಲಿ ಭಾರೀ ಚರ್ಚೆ ಹುಟ್ಟುಹಾಕಿದೆ. ಚಿತ್ರದ ಆಡಿಯೋ ಹಕ್ಕುಗಳು ಬರೋಬ್ಬರಿ 2 ಕೋಟಿ ರೂಪಾಯಿಗೆ ಮಾರಾಟವಾಗಿರುವ ಸುದ್ದಿ ಚಿತ್ರರಂಗದಲ್ಲಿ ಅಚ್ಚರಿ ಮೂಡಿಸಿದೆ.

**ಅರ್ಜುನ್ ಜನ್ಯ ಸ್ಟುಡಿಯೋದಲ್ಲಿ ಶುರುವಾಯ್ತು ಮ್ಯೂಸಿಕ್ ಹಬ್ಬ:** ಇತ್ತೀಚೆಗೆ 'ಅಯೋಗ್ಯ-2' ತಂಡ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಸ್ಟುಡಿಯೋಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದೆ. ಚಿತ್ರದ ನಾಯಕ ನೀನಾಸಂ ಸತೀಶ್, ನಿರ್ದೇಶಕ ಮಹೇಶ್ ಕುಮಾರ್ ಹಾಗೂ ನಿರ್ಮಾಪಕ ಮುನೇಗೌಡ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಪೂಜೆ ಬಳಿಕ ಹಾಡುಗಳ ರೆಕಾರ್ಡಿಂಗ್ ಕೆಲಸಕ್ಕೆ ಅಧಿಕೃತ ಚಾಲನೆ ನೀಡಲಾಗಿದೆ. ಮೊದಲ ಭಾಗದ ಹಾಡುಗಳೇ ಚಿತ್ರದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಾರಣ, ಈ ಬಾರಿ ಸಂಗೀತ ವಿಭಾಗದ ಮೇಲೆ ಚಿತ್ರತಂಡ ವಿಶೇಷ ಗಮನ ಹರಿಸಿದೆ. ಮತ್ತೊಮ್ಮೆ ಅಭಿಮಾನಿಗಳನ್ನು ಕುಣಿಯಿಸುವ ಹಾಡುಗಳನ್ನು ನೀಡುವ ಗುರಿಯೊಂದಿಗೆ ಅರ್ಜುನ್ ಜನ್ಯ ಮತ್ತು ತಂಡ ಕೆಲಸ ಆರಂಭಿಸಿದೆ.

ಹಾಡುಗಳಿಗೆ ಖ್ಯಾತ ಗೀತರಚನೆಕಾರ ಬಹದ್ದೂರ್ ಚೇತನ್ ಕುಮಾರ್ ಸಾಹಿತ್ಯ ಬರೆಯುತ್ತಿದ್ದು, ಮೊದಲ ಭಾಗದ ಮಾದರಿಯಲ್ಲೇ ಯುವಜನರನ್ನು ಸೆಳೆಯುವ ಸಾಲುಗಳನ್ನು ಸಿದ್ಧಪಡಿಸಲಾಗುತ್ತಿದೆ ಎನ್ನಲಾಗಿದೆ.

**ಜೂನ್ 20ಕ್ಕೆ ಮೊದಲ ಹಾಡು ಬಿಡುಗಡೆ:** ಚಿತ್ರದ ಮೊದಲ ಹಾಡು ಇದೇ ಜೂನ್ 20ರಂದು ಬಿಡುಗಡೆಯಾಗಲಿದೆ. ಈಗಾಗಲೇ ಹಾಡಿನ ಚಿತ್ರೀಕರಣ ಮತ್ತು ರೆಕಾರ್ಡಿಂಗ್ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರದ ಕುರಿತು ಕುತೂಹಲ ಹೆಚ್ಚುತ್ತಿದೆ.

ಮ್ಯೂಸಿಕ್ ಕಂಪೋಸಿಂಗ್ ವೇಳೆ ತಂಡ ನಡೆಸಿದ ಸಂಭ್ರಮ, ಚರ್ಚೆ ಹಾಗೂ ರೆಕಾರ್ಡಿಂಗ್ ದೃಶ್ಯಗಳ ವಿಡಿಯೋವನ್ನು ನಿರ್ದೇಶಕ ಮಹೇಶ್ ಕುಮಾರ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೋ ಅಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದ್ದು, ಸಿನಿಮಾ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ.

**'ಏನಮ್ಮಿ' ಕ್ರೇಜ್ ಇಂದಿಗೂ ಕಡಿಮೆಯಾಗಿಲ್ಲ:** 'ಅಯೋಗ್ಯ' ಚಿತ್ರದ 'ಏನಮ್ಮಿ ಏನಮ್ಮಿ' ಹಾಡು ಬಿಡುಗಡೆಯಾದ ಬಳಿಕ ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆದಿತ್ತು. ಕನ್ನಡದಲ್ಲಿ 100 ಮಿಲಿಯನ್ ವೀಕ್ಷಣೆ ಪಡೆದ ಮೊದಲ ಹಾಡು ಎಂಬ ಹೆಗ್ಗಳಿಕೆ ಈ ಹಾಡಿನದ್ದಾಗಿದೆ.

ಯೂಟ್ಯೂಬ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಸೇರಿದಂತೆ ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಈ ಹಾಡು ಸಂಚಲನ ಮೂಡಿಸಿತ್ತು. ಮದುವೆ ಸಮಾರಂಭಗಳು, ಕಾಲೇಜು ಕಾರ್ಯಕ್ರಮಗಳು, ರಿಯಾಲಿಟಿ ಶೋಗಳು ಸೇರಿದಂತೆ ಎಲ್ಲೆಡೆ ಈ ಹಾಡಿನದ್ದೇ ಹವಾ ಇತ್ತು.

ಇಂದಿಗೂ ಆ ಹಾಡು ಹೊಸ ಹಾಡುಗಳ ನಡುವೆ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಅದರ ದೊಡ್ಡ ಸಾಧನೆ ಎಂದು ಸಂಗೀತ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ.

**9 ಲಕ್ಷಕ್ಕೆ ಮಾರಾಟವಾಗಿದ್ದ ಆಡಿಯೋ, ಇಂದು 2 ಕೋಟಿಗೆ** 'ಅಯೋಗ್ಯ' ಮೊದಲ ಭಾಗ ಬಿಡುಗಡೆಯಾಗುವ ಮುನ್ನ ಅದರ ಆಡಿಯೋ ಹಕ್ಕುಗಳನ್ನು ಆನಂದ್ ಆಡಿಯೋ ಸಂಸ್ಥೆ ಕೇವಲ 9 ಲಕ್ಷ ರೂಪಾಯಿಗೆ ಖರೀದಿಸಿತ್ತು. ಆದರೆ ಹಾಡುಗಳು ಬಿಡುಗಡೆಯಾದ ನಂತರ ನಿರೀಕ್ಷೆಗೂ ಮೀರಿ ಯಶಸ್ಸು ಸಾಧಿಸಿದ್ದವು.

ಚಿತ್ರದ ಎಲ್ಲಾ ಹಾಡುಗಳು ಸೇರಿ 25 ಕೋಟಿಗೂ ಅಧಿಕ ವೀಕ್ಷಣೆಗಳನ್ನು ಪಡೆದು ದಾಖಲೆ ಬರೆದಿದ್ದವು. ಇದರ ಪರಿಣಾಮವಾಗಿ ಆನಂದ್ ಆಡಿಯೋ ಸಂಸ್ಥೆಗೆ ಕೋಟ್ಯಂತರ ರೂಪಾಯಿ ಆದಾಯ ಬಂದಿತ್ತು.

ಇದೀಗ ಅದೇ ಯಶಸ್ಸಿನ ವಿಶ್ವಾಸದ ಮೇಲೆ 'ಅಯೋಗ್ಯ-2' ಚಿತ್ರದ ಐದು ಹಾಡುಗಳ ಆಡಿಯೋ ಹಕ್ಕುಗಳನ್ನು ಆನಂದ್ ಆಡಿಯೋ ಸಂಸ್ಥೆ ಬರೋಬ್ಬರಿ 2 ಕೋಟಿ ರೂಪಾಯಿಗೆ ಖರೀದಿಸಿದೆ. ಮೊದಲ ಭಾಗಕ್ಕೆ ಹೋಲಿಸಿದರೆ ಇದು ಸುಮಾರು 20 ಪಟ್ಟು ಹೆಚ್ಚಿನ ಮೊತ್ತವಾಗಿದೆ.

ಸ್ಯಾಂಡಲ್‌ವುಡ್‌ನಲ್ಲಿ ಸಿನಿಮಾ ಬಿಡುಗಡೆಯಾಗುವ ಮೊದಲುವೇ ಇಷ್ಟೊಂದು ದೊಡ್ಡ ಮೊತ್ತಕ್ಕೆ ಆಡಿಯೋ ಹಕ್ಕುಗಳು ಮಾರಾಟವಾಗಿರುವುದು ಚಿತ್ರತಂಡದ ಮೇಲಿರುವ ನಂಬಿಕೆಯನ್ನು ತೋರಿಸುತ್ತದೆ.

ನೀನಾಸಂ ಸತೀಶ್‌ಗೆ ಮತ್ತೊಂದು ಬಿಗ್ ವಿಕ್ಟರಿ: ಕಳೆದ ಕೆಲವು ವರ್ಷಗಳಿಂದ ವಿಭಿನ್ನ ಕಥೆಗಳನ್ನು ಆಯ್ಕೆ ಮಾಡಿಕೊಂಡು ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವ ನೀನಾಸಂ ಸತೀಶ್ ಅವರಿಗೆ 'ಅಯೋಗ್ಯ-2' ದೊಡ್ಡ ಮೈಲಿಗಲ್ಲಾಗುವ ನಿರೀಕ್ಷೆಯಿದೆ.

ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿವೆ. ಶೀಘ್ರದಲ್ಲೇ ಚಿತ್ರ ಸೆನ್ಸಾರ್ ಮಂಡಳಿಯ ಮುಂದೆ ಹೋಗಲಿದ್ದು, ನಂತರ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ.

**ಮತ್ತೆ ರಚಿತಾ-ಸತೀಶ್ ಜೋಡಿ ಮೋಡಿ ಮಾಡುತ್ತಾ?:** ಮೊದಲ ಭಾಗದಲ್ಲಿ ನೀನಾಸಂ ಸತೀಶ್ ಮತ್ತು ರಚಿತಾ ರಾಮ್ ಜೋಡಿ ಪ್ರೇಕ್ಷಕರ ಮನ ಗೆದ್ದಿತ್ತು. ಇವರಿಬ್ಬರ ಕೆಮಿಸ್ಟ್ರಿ ಚಿತ್ರದ ಯಶಸ್ಸಿನ ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು.

ಈ ಬಾರಿ ಕೂಡ ಅದೇ ಜೋಡಿ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದು, ಅಭಿಮಾನಿಗಳ ನಿರೀಕ್ಷೆ ಹೆಚ್ಚಾಗಿದೆ. ಹಳ್ಳಿ ಸೊಗಡು, ಮಾಸ್ ಎಂಟರ್‌ಟೈನ್ಮೆಂಟ್, ಹಾಸ್ಯ, ಪ್ರೀತಿ ಮತ್ತು ಭಾವನಾತ್ಮಕ ಅಂಶಗಳ ಮಿಶ್ರಣದೊಂದಿಗೆ ಸಿನಿಮಾ ಸಿದ್ಧವಾಗುತ್ತಿದೆ.

**ಗಾಂಧಿನಗರದ ಲೆಕ್ಕಾಚಾರವೇ ಬದಲಾಗುತ್ತಾ?:** ಒಂಬತ್ತು ಲಕ್ಷ ರೂಪಾಯಿಗೆ ಮಾರಾಟವಾಗಿದ್ದ ಮೊದಲ ಭಾಗದ ಆಡಿಯೋ ಹಕ್ಕುಗಳು ಇಂದು ಎರಡು ಕೋಟಿಗೆ ತಲುಪಿರುವುದು 'ಅಯೋಗ್ಯ' ಬ್ರ್ಯಾಂಡ್‌ನ ಶಕ್ತಿಯನ್ನು ತೋರಿಸುತ್ತದೆ. ಸಿನಿಮಾ ಇನ್ನೂ ಬಿಡುಗಡೆಯಾಗದಿದ್ದರೂ ಈಗಾಗಲೇ ಆಡಿಯೋ ಮಾರುಕಟ್ಟೆಯಲ್ಲಿ ದಾಖಲೆ ನಿರ್ಮಿಸಿದೆ.

'ಏನಮ್ಮಿ' ಹಾಡಿನ ಮ್ಯಾಜಿಕ್ ಅನ್ನು ಮತ್ತೊಮ್ಮೆ ಸೃಷ್ಟಿಸಲು ಅರ್ಜುನ್ ಜನ್ಯ, ನೀನಾಸಂ ಸತೀಶ್, ಮಹೇಶ್ ಕುಮಾರ್ ಹಾಗೂ ಇಡೀ ಚಿತ್ರತಂಡ ಸಜ್ಜಾಗಿದ್ದು, ಅಯೋಗ್ಯ-2 ಇದೀಗ ಗಾಂಧಿನಗರದ ಬಹುನಿರೀಕ್ಷಿತ ಚಿತ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಹಾಡುಗಳು ಹಿಟ್ ಆದರೆ, ಮೊದಲ ಭಾಗದ ಎಲ್ಲಾ ದಾಖಲೆಗಳನ್ನು ಎರಡನೇ ಭಾಗ ಮುರಿಯುವ ಸಾಧ್ಯತೆ ಇದೆ ಎಂಬ ಲೆಕ್ಕಾಚಾರ ಈಗಾಗಲೇ ಚಿತ್ರರಂಗದಲ್ಲಿ ಶುರುವಾಗಿದೆ.

# 175ನೇ ಚಿತ್ರ 'ಮದರ್'ನಲ್ಲಿ ವಿಭಿನ್ನ ಪಾತ್ರದಲ್ಲಿ ನಟಿ ಶ್ರುತಿ

ಕನ್ನಡ ಚಿತ್ರರಂಗದಲ್ಲಿ ನಾಯಕಿಯಾಗಿ ಮೆರೆದು ಇದೀಗ ಪೋಷಕ ನಟಿ ಯಾಗಿಯೂ ಬೆಳ್ಳಿ ತೆರೆಯಲ್ಲಿ ಕಾಣಿಸಿ ಕೊಳ್ಳುತ್ತಿರುವ ನಟಿ ಶ್ರುತಿ ಇದೀಗ ತಮ್ಮ ಮುಂಬರುವ 175ನೇ ಚಿತ್ರವಾದ 'ಮದರ್'ನಲ್ಲಿ ಕಾಣಿಸಿಕೊಂಡಿದ್ದಾರೆ. ರಾಕೇಶ್ ಸೋಮಣ್ಣ ನಿರ್ದೇಶನದ 'ಮದರ್' ಚಿತ್ರವು ಮಂಡ್ಯದ ಅನಕ್ಷರಸ್ಥ ಮಹಿಳೆಯೊಬ್ಬಳು ತನ್ನ ಕುಟುಂ ಬವನ್ನು ಎಲ್ಲ ಪ್ರತಿಕೂಲ ಪರಿಸ್ಥಿತಿಗಳಿಂದ ರಕ್ಷಿಸಲು ಹೋರಾಡುವ ಕಥೆಯನ್ನು ಹೊಂದಿದೆ. ಶ್ರುತಿ ಅವರು ಹಿಂದೆಂದೂ ಕಾಣಿಸಿ ಕೊಂಡಿರದ ಪಾತ್ರದಲ್ಲಿ ನಟಿಸಿದ್ದಾರೆ ಎಂದು ಚಿತ್ರತಂಡ ಹೇಳಿದೆ.

'ಮದರ್ ತುಂಬಾ ಶಕ್ತಿಶಾಲಿ ಕಥೆ. ಶ್ರುತಿ ಮೇಡಂ ಒರಟಾದ, ಕಚ್ಚಾ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಮತ್ತು ಈ ರೂಪಾಂತರವು ಚಿತ್ರದ ದೊಡ್ಡ ವಿಚಾರಗಳಲ್ಲಿ ಒಂದಾಗಿದೆ ಎಂದು ನಾನು ನಂಬುತ್ತೇನೆ' ಎಂದು ಸೋಮಣ್ಣ ಹೇಳಿದರು.

ಚಿತ್ರವನ್ನು ಮಂಡ್ಯ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ 35 ದಿನಗಳ ಕಾಲ ಚಿತ್ರೀಕರಣ ಮಾಡಲು ನಿರ್ಧರಿಸಲಾಗಿದೆ.

'ಪ್ರತಿಯೊಂದು ಚಿತ್ರವೂ ವಿಶೇಷ, ಆದರೆ ಇದು ವಿಭಿನ್ನ. ನನ್ನನ್ನು ಚಿತ್ರರಂಗಕ್ಕೆ ಕರೆತಂದಿದ್ದಕ್ಕಾಗಿ ಡಾ. ರಾಜ್‌ಕುಮಾರ್ ಸರ್ ಅವರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ನಾನು ಇಷ್ಟು ವರ್ಷಗಳ ಕಾಲ ಇಲ್ಲಿ ಉಳಿದುಕೊಳ್ಳಲು ಸಾಧ್ಯವಾದರೆ, ನನ್ನ ವೃತ್ತಿಜೀವನದುದ್ದಕ್ಕೂ ಜನರು ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಮತ್ತು ಅವಕಾಶ ನೀಡಿದ್ದಕ್ಕೆ ನಾನು ತುಂಬಾ ಋಣಿಯಾಗಿದ್ದೇನೆ' ಎನ್ನುತ್ತಾರೆ ನಟಿ ಶ್ರುತಿ.

'ನನ್ನ 175ನೇ ಚಿತ್ರ ಸ್ಮರಣೀಯವಾಗಿ ಉಳಿಯು ವಂತೆ ನೋಡಿಕೊಳ್ಳುವುದಾಗಿ ನಿರ್ದೇಶಕರು ನನಗೆ ಹೇಳಿದರು.



ಆದರೆ, ನಿರ್ಮಾಪಕರು ಚಿತ್ರದ ಬಗ್ಗೆ ಅಷ್ಟೇ ಹೆಮ್ಮೆ ಪಡುವಂತೆ ನೋಡಿಕೊಳ್ಳಲು ನಾನು ಅವರಿಗೆ ಹೇಳಿದೆ. ನಿರ್ಮಾಪಕರು ನಂಬುವುದರಿಂದಲೇ ಯಾವುದೇ ನಟರು ಕೆಲಸ ಮಾಡವು ಸಾಧ್ಯವಾಗ ುತ್ತದೆ. ನಿರ್ಮಾಪಕರ ಕೊಡುಗೆಯನ್ನು ಎಂದಿಗೂ ಮರೆಯ ಬಾರದು' ಎಂದರು.

ಶೂಟಿಂಗ್‌ಗೆ ಮೊದಲು ಕಾರ್ಯಾಗಾರ ನಡೆಸುವಂತೆ ವಿನಂತಿಸಿದ ಮೊದಲ ಚಿತ್ರ ಮದರ್ ಆಗಿದೆ. 'ಇಷ್ಟು ವರ್ಷಗಳಲ್ಲಿ, ನಾನು ಎಂದಿಗೂ ಚಿತ್ರಕ್ಕಾಗಿ ಕಾರ್ಯಾಗಾರಗಳನ್ನು ಕೇಳಿರಲಿಲ್ಲ. ಆದರೆ, ಈ ಕಥೆಗೆ ಸಿದ್ಧತೆಯ ಅಗತ್ಯವಿತ್ತು. ತಂಡದ ವಿಧಾನದಲ್ಲಿ ಏನೋ ತಾಜಾ ಮತ್ತು ಪ್ರಾಮಾಣಿಕತೆ ಇದೆ ಎಂದು ನಾನು ಭಾವಿಸಿದೆ ಮತ್ತು ನಾನು ಅದಕ್ಕೆ ಸಂಪೂಣ ವಾಗಿ ಸಿದ್ಧವಾಗಲು ಬಯಸುತ್ತೇನೆ' ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ನಟ ವಿನೋದ್ ಪ್ರಭಾಕರ್, ಶ್ರುತಿ ಅವ ರೊಂದಿಗಿನ ತಮ್ಮ ದೀರ್ಘಕಾಲದ ಒಡನಾಟದ ಬಗ್ಗೆ ಮಾತನಾಡಿದರು.

'ನಾನು ಅವರನ್ನು ಯಾವಾಗಲೂ ಅಮ್ಮ ಎಂದು ಕರೆಯುತ್ತೇನೆ. 175 ಚಿತ್ರಗಳನ್ನು ಮಾಡುವುದು ಸುಲಭವಲ್ಲ. ಕೆಲವೇ ಕೆಲವು ಕಲಾವಿದರು ಅಂತಹ ಮೈಲಿಗಲ್ಲನ್ನು ಪಡೆಯಲು ಸಾಧ್ಯ. ವಿಶೇಷವೆಂದರೆ ಶ್ರುತಿ ಅಮ್ಮ ಕೇವಲ ಯಶಸ್ಸನ್ನು ಮಾತ್ರವಲ್ಲದೆ ಅಪಾರ ಗೌರವವನ್ನು ಗಳಿಸಿದ್ದಾರೆ. ಅವರಿಗೆ ಬದಲಿಯಾಗಿ ಯಾರೂ ಇಲ್ಲ' ಎಂದರು.

'ಒಂದು ಸೆಟ್‌ಗೆ ಅವರು ತರುವ ಶಕ್ತಿಯನ್ನು ನಾನು ನೇರವಾಗಿ ನೋಡಿದ್ದೇನೆ. ಆ ಉತ್ಸಾಹವು ವರ್ಷಗಳಲ್ಲಿ ಬದಲಾಗದೆ ಉಳಿದಿದೆ ಮತ್ತು ಅದಕ್ಕಾಗಿಯೇ ಅವರು ಅನೇಕ ನಟರಿಗೆ ಸ್ಫೂರ್ತಿ ನೀಡುತ್ತಿದ್ದಾರೆ' ಎಂದು ಮಾದೇವ ಚಿತ್ರದಲ್ಲಿನ ನಟನೆಯನ್ನು ನೆನಪಿಸಿಕೊಂಡರು.

ಚಿತ್ರದಲ್ಲಿ ಶ್ರುತಿ ಅವರ ಮಗನ ಪಾತ್ರದಲ್ಲಿ ನಟಿಸಿರುವ ನಟ ಚಿರಂಜೀವಿ, ಅನುಭವಿ ಕಲಾವಿದೆಯೊಂದಿಗೆ ತೆರೆ ಹಂಚಿಕೊಳ್ಳಲು ಉತ್ಸುಕನಾಗಿದ್ದೇನೆ ಎಂದು ಹೇಳಿದರು.

ಆರತಿ ಮತ್ತು ಕೆ ಸತೀಶ್ ಚಂದ್ರ ನಿರ್ಮಿಸಿರುವ ಮದರ್‌ನಲ್ಲಿ ಪ್ರಸನ್ನ ಶೆಟ್ಟಿ, ಅರ್ಚನಾ ಹೆಗ್ಡೆ, ಅಭಯ್ ಪುನೀತ್, ಗೀತಾ ಂಜಲಿ ಮತ್ತು ಹಿಮಶ್ರೀ ಕೂಡ ನಟಿಸಿದ್ದಾರೆ. ಚಿತ್ರಕ್ಕೆ ಅಂಜನ್ ಅವರ ಸಂಗೀತ ಸಂಯೋಜನೆ, ಯು ಅಶ್ವಿನ್ ಅವರ ಛಾಯಾಗ್ರಹಣ, ವಸಂತ್ ಅವರ ಸಂಕಲನ ಮತ್ತು ನಾಗಾರ್ಜುನ ಶರ್ಮಾ ಅವರ ಸಾಹಿತ್ಯವಿದೆ.